# ವನವಾಸಿಗಳ ಸಬಲೀಕರಣ ಮತ್ತು ರಾಮಕೃಷ್ಣ ಮಿಷನ್

ವಿಜಯಕುಮಾರ್

ರಾಮಕೃಷ್ಣ ಮಿಷನ್ನಿನ ಪ್ರಮುಖ ಸೇವಾಕೇಂದ್ರವೊಂದನ್ನು ಈ ಲೇಖನದ ಮೂಲಕ ವಿವೇಕಪ್ರಭ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀ ವಿಜಯಕುಮಾರ ಅವರು ಪರಿಚಯಿಸಿದ್ದಾರೆ.

ಆಫ್ರಿಕವನ್ನು ಬಿಟ್ಟರೆ ಬುಡಕಟ್ಟು ಜನಾಂಗದವರು ಅತ್ಯಂತ ದಟ್ಟವಾಗಿ ಕೇಂದ್ರೀಕೃತವಾಗಿರುವ ದೇಶವೆಂದರೆ ಭಾರತವೇ. ನಮ್ಮ ದೇಶದ ಜನಸಂಖ್ಯೆಯಲ್ಲಿ ಶೇ.೮ರಷ್ಟು ಗಿರಿಜನರು ಇದ್ದಾರೆ. ಅದರಲ್ಲೂ ಮಧ್ಯಪ್ರದೇಶದ ಗುಡ್ಡಗಾಡುಗಳಲ್ಲಿರುವ ಬುಡಕಟ್ಟು ಜನಾಂಗದವರ ಸಂಖ್ಯೆ ಭಾರತದಲ್ಲಿರುವ ಆದಿವಾಸಿಗಳ ಕಾಲು ಭಾಗದಷ್ಟಿದೆ ಎಂದು ಸಮೀಕ್ಷೆ ಮಾಡಲಾಗಿದೆ. ಈ ಪ್ರದೇಶದಲ್ಲಿ ಅಂತಹ ಜನಾಂಗಕ್ಕಾಗಿ ಕೈಗೊಳ್ಳಬೇಕಾದ ಅಭಿವೃದ್ಧಿಯ ಕಾರ್ಯ ಎಷ್ಟು ಬೃಹತ್‌ಪ್ರಮಾಣದ್ದು ಎಂಬುದನ್ನು ಈ ಸಮೀಕ್ಷೆ ಸೂಚಿಸುತ್ತದೆ. ಈಗಿನ ಛತ್ತೀಸ್‌ಘಡ್ ರಾಜ್ಯದ ಅಭುಜ್ ಮರ್ ಪ್ರದೇಶದಲ್ಲಿ ವನವಾಸಿಗಳ ಸಮಗ್ರ ಅಭಿವೃದ್ಧಿಯ ಸವಾಲನ್ನು ಸ್ವೀಕರಿಸಿ ನಾರಾಯಣಪುರವನ್ನು ನೆಲೆಯಾಗಿಟ್ಟು ಕೊಂಡು ಸುಮಾರು ಮೂರು ದಶಕಗಳಿಂದ ದಣಿವರಿಯದೆ ಕರ್ಮಯಜ್ಞದಲ್ಲಿ ನಿರತವಾಗಿರುವ ಅಲ್ಲಿನ ರಾಮಕೃಷ್ಣ ಮಿಷನ್ ಈ ಆದಿವಾಸಿಗಳ ಸ್ವರೂಪದಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತಂದಿರುವ ಒಂದು ಮಾದರಿ ಸೇವಾಕೇಂದ್ರವಾಗಿದೆ. ಎಲ್ಲರಿಂದ ದೂರವಿದ್ದು ಪ್ರತ್ಯೇಕವಾಗಿ ಬದುಕುತ್ತಿದ್ದ ಈ ಜನಾಂಗಗಳು ಈಗ ಹೊರಜಗತ್ತಿನ ಸಂಪರ್ಕಕ್ಕೆ ಬರುತ್ತಿರುವುದು, ಆತ್ಮ ವಿಶ್ವಾಸದಿಂದ ತಮ್ಮದೇ ಆದ ಹಿರಿಮೆಯನ್ನು ಉಳಿಸಿಕೊಂಡು ಇತರರೊಂದಿಗೆ ಹೊಂದಿಕೊಳ್ಳುತ್ತಿರುವುದು ಈ ಬದಲಾವಣೆ ಗಳಲ್ಲಿ ಕಂಡುಬಂದಿರುವ ಮುಖ್ಯ ಸಂಗತಿಗಳು. ಶಿಕ್ಷಣದ ಬೆಳಕು, ಚಿಕಿತ್ಸೆಯ ಸೌಲಭ್ಯ ಹಾಗೂ ಬದುಕಿನಲ್ಲಿ ಹೊಸ ಜೀವನದ ಆಶ್ವಾಸನೆಯನ್ನು ಇವರು ಕಾಣುವಂತಾಗಿದೆ. ಇವರು ಉನ್ನತ ಚಿಂತನೆಗಳ ಆಧುನಿಕ ಜೀವನವನ್ನು ಅಂಗೀಕರಿಸುವಂತೆ ಮಾಡಿ ರುವ ಸಾಧನೆ ಸಣ್ಣದೇನಲ್ಲ.

ಅಭುಜ್‌ಮರ್‌ನ ಬುಡಕಟ್ಟು ಜನಾಂಗದ ಜನಸಂಖ್ಯೆ ಸುಮಾರು ೨೭,೦೦೦. ಇವರೆಲ್ಲ ೪೦೦೦ ಚ.ಕೀ. ವಿಸ್ತೀರ್ಣದ ವಿಶಾಲವಾದ ಪ್ರದೇಶದಲ್ಲಿ ಚದುರಿಹೋಗಿರುವ ೨೭೦ ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ. ಗಂಗೆ ಮತ್ತು ಗೋದಾವರಿ ನಡುವೆ ವಾಸ ವಾಗಿರುವ ಈ ಬುಡಕಟ್ಟು ಜನಾಂಗವನ್ನು ಮೂಲತಃ ಮರಿಯಾ ಅಥವಾ 'ಗುಡ್ಡದ ಮರಿಯಾ'ಗಳೆಂದು ಕರೆಯುತ್ತಾರೆ. ಅವರ ಮೈಕಾಂತಿ ಹಾಗೂ ದಷ್ಟಪುಷ್ಟವಾದ ಮೈಕಟ್ಟು ಅನೇಕರನ್ನು ಚಕಿತಗೊಳಿಸುತ್ತದೆ. 'ಗುಡ್ಡಪ್ರದೇಶಗಳ ಕಗ್ಗಂಟು' ಎಂದೇ ಕರೆಯಲಾಗುವ ಅಭುಜ್‌ಮರ್ ಅತ್ಯಂತ ದುರ್ಗಮವಾದ ಪ್ರದೇಶ. ಇಂದಿಗೂ ಕೂಡ ವರ್ಷದಲ್ಲಿ ಆರು ತಿಂಗಳು ಸತತ ಮಳೆಯಿಂದಾಗಿ ಹೊರಗಿನ ನಾಗರಿಕ ಪ್ರಪಂಚದಿಂದ ಈ ಪ್ರದೇಶ ಸಂಪರ್ಕರಹಿತವಾಗುತ್ತದೆ. ಈ ಕಾರಣದಿಂದಲೇ ನಿಸರ್ಗ ದೊಂದಿಗೆ ಬದುಕುವ ಸಂಸ್ಕೃತಿ ಇವರಿಗೆ ಪರಂಪರಾಗತವಾಗಿ ಬಂದಿರುತ್ತದೆ. ಇತರೆ ಜೀವಸಂಕುಲಗಳೊಂದಿಗೆ ನಿಕಟವಾದ ಸಂಪರ್ಕ ಹೊಂದಿರುವ ಬುಡಕಟ್ಟು ಜನಾಂಗವು ಪರಿಸರ ಸಂರಕ್ಷಣೆಯಂತಹ ಸಾಂಪ್ರದಾಯಿಕ ಮೌಲ್ಯಗಳನ್ನೂ, ಜೀವನ ನಿರ್ವಹಣಾ ವಿಧಾನವನ್ನೂ, ಜೊತೆಗೆ ತಮ್ಮ ಜನಾಂಗೀಯ ವೈಶಿಷ್ಟ್ಯವನ್ನು ಕಾಪಾಡಿಕೊಳ್ಳುವಂತೆ ನೋಡಿಕೊಳ್ಳಬೇಕಾದುದು ಬಹಳ ಮುಖ್ಯವಾಗುತ್ತದೆ.

'ಅಭುಜ್'ಎಂದರೆ ಶಿಕ್ಷಣದ ಬೆಳಕಿಲ್ಲದ; 'ಮರ್' ಎಂದರೆ ಪಹಾಡ್ ಅಥವಾ ಬೆಟ್ಟ, ಅರಣ್ಯ ಎಂಬ ಅರ್ಥವೂ ಇದೆ. ದಾರಿದ್ರ್ಯ, ಆಧುನಿಕ ವಿಚಾರಗಳ ಬಗೆಗಿನ ಅಜ್ಞಾನ, ಅನಾರೋಗ್ಯ ಹಾಗೂ ಆರ್ಥಿಕ ಶೋಷಣೆಗಳಿಗೆ ಶತಶತಮಾನ ಗಳಿಂದಲೂ ಒಳಗಾಗಿರುವ ಈ ಅಸಹಾಯಕ ಜನಾಂಗದ ಮಧ್ಯೆ ಅತ್ಯಂತ ಪ್ರತಿಕೂಲವಾದ ಪರಿಸ್ಥಿತಿಗಳನ್ನು ಎದುರಿಸುತ್ತ ರಾಮಕೃಷ್ಣ ಮಿಷನ್ ಇವರ ಏಳ್ಗೆಗಾಗಿ ದುಡಿಯುವ ಸಂಕಲ್ಪ ಮಾಡಿತು. ಈ ಮುಂಚೆ ರಾಮಕೃಷ್ಣ ಮಿಷನ್ ದೇಶದ ಈಶಾನ್ಯ ದಿಕ್ಕಿನಲ್ಲಿ ಬುಡಕಟ್ಟು ಜನಾಂಗದವರ ಏಳ್ಗೆಯಲ್ಲಿ ಸುಮಾರು ಎರಡು ದಶಕಗಳ ಕಾಲ ತಮ್ಮನ್ನು ತೊಡಗಿಸಿಕೊಂಡು ಈ ಕ್ಷೇತ್ರದಲ್ಲಿ ಸಾಕಷ್ಟು ಪರಿಣತಿಯನ್ನು ಹೊಂದಿತ್ತು. ೧೯೮೫, ಆಗಸ್ಟ್ ೨ರಂದು ರಾಮಕೃಷ್ಣ ಮಿಷನ್ ತನ್ನ ರಾಯ್‌ಪುರ್ ಶಾಖೆಯ ಮೂಲಕ ಬಸ್ತರ್ ಜಿಲ್ಲೆಯಲ್ಲಿನ, ವಿಶೇಷವಾಗಿ ಅಭುಜ್ ಮರ್ ನಲ್ಲಿನ ವನವಾಸಿಗಳಿಗಾಗಿ ನಾರಾಯಣಪುರವನ್ನು ಮೂಲ ಶಿಬಿರವನ್ನಾಗಿಟ್ಟುಕೊಂಡು ತನ್ನ ಸೇವಾಕಾರ್ಯವನ್ನು ಪ್ರಾರಂಭಿಸಿತು. ಬುಡಕಟ್ಟು ಜನಾಂಗದ ಸಮಗ್ರ ಅಭಿವೃದ್ಧಿ ಯನ್ನು ಗಮನದಲ್ಲಿಟ್ಟುಕೊಂಡಿದ್ದ ಈ ಪರಿಕಲ್ಪನೆಯೇ 'ಅಭುಜ್‌ಮರ್ ಗ್ರಾಮೀಣಾಭಿವೃದ್ಧಿ ಯೋಜನೆ'. ಈ ಯೋಜನೆಯಡಿ ೧೯೮೬ರ ಜುಲೈ ೨ರಂದು ಆದಿವಾಸಿ ಮಕ್ಕಳಿಗಾಗಿ ಶಾಲೆಯೊಂದನ್ನು ತೆರೆಯಲಾಯಿತು. ಈಗ ಈ ಶಾಲೆ ಬೆಳೆದು ನಾರಾಯಣಪುರದ ವಿಸ್ತೃತವಾದ ೪೨ ಎಕರೆ ಪ್ರದೇಶದಲ್ಲಿ 'ವಿವೇಕಾನಂದ ವಿದ್ಯಾಪೀಠ' ಎಂಬ ವಿಶಾಲವಾದ ಆವಾಸೀ ಶಾಲೆಯಾಗಿದೆ. ಇಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ಒಂದರಿಂದ ಐದನೇ ತರಗತಿಯವರೆಗೂ, ಮಾಧ್ಯಮಿಕ ಹಂತದಲ್ಲಿ ಆರರಿಂದ ಹನ್ನೆರಡನೇ ತರಗತಿ

ಯವರೆಗೂ ಛತ್ತೀಸ್‌ಘಢದ ಶಿಕ್ಷಣ ಇಲಾಖೆಯು ನಿಯಮಿಸಿರುವ ಪಠ್ಯವನ್ನು ಇವರಿಗೆ ಕಲಿಸಲಾಗುತ್ತದೆ. ಹತ್ತನೇ ತರಗತಿಯ ಮತ್ತು ಹನ್ನೆರಡನೇ ತರಗತಿಯ ಪರೀಕ್ಷೆಗಳಲ್ಲಿ ಉತ್ತಮ ಫಲಿತಾಂಶವನ್ನು ಗಳಿಸುತ್ತಿರುವ ಈ ಶಾಲೆಯಲ್ಲಿ ಮರಿಯಾ, ಗೊಂಡ ಮುಂತಾದ ಆದಿವಾಸಿ ಕುಟುಂಬಗಳಿಂದ ಬರುವ ಮಕ್ಕಳು ಪ್ರವೇಶ ಪಡೆಯುತ್ತಾರೆ. ಈಗಿನ ವಿದ್ಯಾರ್ಥಿ ಸಂಖ್ಯೆ ೬೪೩ (೩೫೫ ಬಾಲಕರು ಹಾಗೂ ೨೮೮ ಬಾಲಕಿಯರು). ಆಶ್ರಮದ ಪ್ರಾಂಗಣದಲ್ಲಿ ಫುಟ್‌ಬಾಲ್, ಕ್ರಿಕೆಟ್, ಬಾಸ್ಕೆಟ್‌ಬಾಲ್ ಆಟಗಳಿಗಾಗಿ ವಿಸ್ತಾರವಾದ ಕ್ರೀಡಾಂಗಣ, ಎನ್.ಸಿ.ಸಿ., ಸ್ಕೌಟಿಂಗ್ ಇರುವುದರಿಂದ ಇಲ್ಲಿ ಕಲಿತ ಮಕ್ಕಳು ನಾಗರಿಕ ಶಾಲೆಗಳ ಮಕ್ಕಳಿಗಿಂತ ಯಾವುದೇ ರೀತಿಯಲ್ಲೂ ಕಮ್ಮಿಯಿಲ್ಲ. ಭಾರತೀಯ ಸಂಸ್ಕೃತಿಯ ಆದರ್ಶವನ್ನು ಮೌಲ್ಯಶಿಕ್ಷಣದ ಮೂಲಕ ನೀಡುತ್ತಿರುವುದರಿಂದ ಇಲ್ಲಿ ಕಲಿತವರು ಮನುಷ್ಯತ್ವದ ವಿಕಾಸ ಹಾಗೂ ಬದುಕನ್ನು ಕಟ್ಟುವ ಚಿಂತನೆಗಳಿಂದ ಪ್ರಭಾವಿತರಾಗಿರುತ್ತಾರೆ. ಹೀಗಾಗಿ ಈ ಶಾಲೆಯಿಂದ ಹೊರಬಂದಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯರು ಹೊಸ ಭರವಸೆಯನ್ನು ಮೂಡಿಸುತ್ತಿರುವುದು ಆಶ್ಚರ್ಯವೇನಲ್ಲ. ಅಭುಜ್‌ಮರ್‌ನ ನಾರಾಯಣಪುರದಲ್ಲಿಯೇ ಅಲ್ಲದೆ—ಅಕಾಬೇಡಾ, ಕುತುಲ್, ಕಚ್ಚಾಪಾಲ್, ಇರಕ್‌ಭಟ್ಟಿ ಹಾಗೂ ಕುಂದಲಾ ಗ್ರಾಮಗಳಲ್ಲಿ—ಇನ್ನೂ ಐದು ಆವಾಸೀ ಶಾಲೆಗಳನ್ನು ನಡೆಸಲಾಗುತ್ತಿದೆ. ಇವುಗಳಲ್ಲಿ ೫೫೮ ವಿದ್ಯಾರ್ಥಿಗಳು (೩೬೬ ಬಾಲಕರು ಹಾಗೂ ೧೯೨ ಬಾಲಕಿಯರು) ವ್ಯಾಸಂಗ ಮಾಡುತ್ತಿದ್ದಾರೆ. ಪ್ರಾಥಮಿಕ ತರಗತಿಗಳ ಪರೀಕ್ಷೆಗಳಲ್ಲಿ ಫಲಿತಾಂಶ ಚೆನ್ನಾಗಿಯೇ ಇದೆ. ತನ್ನ ಶೈಕ್ಷಣಿಕ ಕಾರ್ಯಕ್ರಮದ ವಿಸ್ತರಣೆಯಾಗಿ ನಾರಾಯಣಪುರದ ರಾಮಕೃಷ್ಣ ಮಿಷನ್ ಆಶ್ರಮವು **ವಿವೇಕ ರಥದ**—ಸಂಚಾರಿ ವೀಡಿಯೋ—ಮೂಲಕ ಸುತ್ತಮುತ್ತಲಿನ ಅರಣ್ಯದಲ್ಲಿರುವ ಆದಿವಾಸಿ ಕುಟುಂಬಗಳಿಗೆ ವಿವಿಧ ರೀತಿಯ ಶಿಕ್ಷಣ ನೀಡುವ ಕಾರ್ಯಕ್ರಮವನ್ನೂ ಹಮ್ಮಿಕೊಂಡಿದೆ. ಈ ಕಾರ್ಯಕ್ರಮ ಅತ್ಯಂತ ಜನಪ್ರಿಯವಾಗಿದ್ದು ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಆಕರ್ಷಿಸುತ್ತಿದೆ.

ಜೀವನೋಪಾಯಕ್ಕಾಗಿ ವಿವೇಕಾನಂದ ವನವಾಸೀ ಯುವ ಪ್ರಶಿಕ್ಷಣ ಕೇಂದ್ರದ ಮೂಲಕ ಆದಿವಾಸಿಗಳಿಗೆ ಶಿಕ್ಷಣದ ಜೊತೆ ವೃತ್ತಿ ಶಿಕ್ಷಣವನ್ನು ನೀಡಲಾಗುತ್ತಿದೆ. ಬೋಧಕರು, ಆರೋಗ್ಯ ಕಾರ್ಯಕರ್ತರ ವೃತ್ತಿಗಳಲ್ಲದೆ, ಬೆರಳಚ್ಚು, ಮರಗೆಲಸ, ಹೊಲಿಗೆ, ಆಟೋಮೊಬೈಲ್, ಎಲೆಕ್ಟ್ರಿಕಲ್ ಮುಂತಾದ ವೃತ್ತಿಗಳಲ್ಲಿ ತರಬೇತಿ ನೀಡಲಾಗುತ್ತಿದೆ. ಅಭ್ಯರ್ಥಿಗಳ ವಾಸ, ಊಟ ಹಾಗೂ ತರಬೇತಿಯ ಖರ್ಚನ್ನು ಆಶ್ರಮವೇ ನಿರ್ವಹಿಸುತ್ತಿದೆ.


೧೯೮೭ರಷ್ಟು ಹಿಂದೆಯೇ ಆರಂಭವಾದ 'ವಿವೇಕಾನಂದ ಆರೋಗ್ಯಧಾಮ' ಹೊರರೋಗಿಗಳ ಚಿಕಿತ್ಸಾಲಯವಾಗಿ ಆರಂಭಗೊಂಡು ಈಗ ೩೦ ಹಾಸಿಗೆಗಳಿಂದ ಕೂಡಿದ ಸುಸಜ್ಜಿತ ಆಸ್ಪತ್ರೆಯಾಗಿದೆ. ಆಧುನಿಕ ರೋಗನಿದಾನ ಯಂತ್ರಗಳಾದ ಸೋನೋಗ್ರಫಿ ಯಂತ್ರ, ಸೆಮಿ ಆಟೋ ಅನಲೈಸರ್, ಬಾಯಿಲ್–ಟೆಕ್ ಅರಿವಳಿಕೆ ಯಂತ್ರ, ಎಚ್.ಬಿ.ಎಲೆಕ್ಟ್ರೋಫೋರೋಸಿಸ್ ಸಲಕರಣೆ, ಇ.ಸಿ.ಜಿ ಅನಲೈಸರ್ ಮುಂತಾದ ಸಲಕರಣೆಗಳಿವೆ. ಚರ್ಮ ಮತ್ತು ಮೂಳೆಗಳ ಚಿಕಿತ್ಸೆಗಾಗಿ ಫಿಜಿಯೋತೆರಪಿ ವಿಭಾಗವೂ ಇದೆ. ಇವೆಲ್ಲವೂ ಹೆಚ್ಚು ಹೆಚ್ಚು ಆದಿವಾಸಿಗಳ ಉಚಿತ ಚಿಕಿತ್ಸೆಗಾಗಿ ಉಪಯೋಗಿಸಲ್ಪಡುತ್ತವೆ. ಪ್ರಸಕ್ತ ವರ್ಷದಲ್ಲಿ ಒಟ್ಟು ೨೭,೧೭೪ ಹೊರರೋಗಿಗಳು ಹಾಗೂ ೨೫೫೨ ಒಳರೋಗಿಗಳು ಇಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಔಷಧಿಗಳನ್ನು ಅವುಗಳ ಮೂಲಬೆಲೆಗೇ ಮಾರುವ ಅಂಗಡಿಯನ್ನು ತೆರೆಯಲಾಗಿದೆ. ಪ್ರಸಕ್ತ ವರ್ಷದಲ್ಲಿ ಈ ಆಸ್ಪತ್ರೆಯ ಆಯವ್ಯಯ ೨೮ ಲಕ್ಷ ರೂಪಾಯಿಗಳು.

'ವಿವೇಕಾನಂದ ಚಲ್ ಚಿಕಿತ್ಸಾಲಯ' ಎಂಬ ಸಂಚಾರಿ ವೈದ್ಯಕೀಯ ಘಟಕ ದೂರದಲ್ಲಿರುವ ನೂರಾರು ಗ್ರಾಮಗಳ ಬಡರೋಗಿಗಳಿಗೆ ಉಚಿತ ಚಿಕಿತ್ಸೆ ನೀಡುತ್ತಿದೆ. ಇಷ್ಟೇ ಅಲ್ಲದೆ ಈ ಆಶ್ರಮವು ಅಭುಜ್‌ಮರ್‌ನಲ್ಲಿ ನುರಿತ ಆರೋಗ್ಯ ಕಾರ್ಯಕರ್ತರಿಂದ ಐದು ಸ್ವಾಸ್ಥ್ಯ ಕೇಂದ್ರಗಳನ್ನು ನಡೆಸುತ್ತಿದೆ. ಇವುಗಳಲ್ಲಿ ಚಿಕಿತ್ಸೆ ಪಡೆಯುವ ರೋಗಿಗಳಲ್ಲಿ ಶೇ.೭೦ರಿಂದ ೮೦ರಷ್ಟು ಆದಿವಾಸಿಗಳು.

ನಾರಾಯಣಪುರದಲ್ಲಿನ ಆಶ್ರಮವು ಸಮಾಜಸ್ವಾಸ್ಥ್ಯದ ಪರಿಕಲ್ಪನೆಯನ್ನು ಕಾರ್ಯಗತಗೊಳಿಸಿದೆ. ರೋಗನಿರೋಧಕ (Preventive) ಆರೋಗ್ಯಪೋಷಣ (Promotive) ಮತ್ತು ಚಿಕಿತ್ಸಾತ್ಮಕವಾದ (Curative) ಸಮಗ್ರ ಆರೋಗ್ಯ ಪರಿಕಲ್ಪನೆಯನ್ನು ಕಾರ್ಯಗತಗೊಳಿಸಿರುವ ಪ್ರಯತ್ನವೇ Reaching the Unreached (ಸಂಪರ್ಕರಹಿತರನ್ನು ಸಂಸರ್ಕಿಸುವುದು). ಇದರ ಮೂಲ ಉದ್ದೇಶ ಬುಡಕಟ್ಟು ಜನಾಂಗದಿಂದಲೇ ಆಯ್ದ ಸ್ವಯಂಸೇವಕ ಆರೋಗ್ಯ ಕಾರ್ಯಕರ್ತರಿಗೆ ಆಶ್ರಮದಿಂದಲೇ ಪ್ರಾಥಮಿಕ ಆರೋಗ್ಯ ಸಂರಕ್ಷಣೆಯ ಬಗ್ಗೆ ತರಬೇತಿ ನೀಡಿ, ಆರೋಗ್ಯ ಶಿಕ್ಷಣದ ಮೂಲಕ ಅವರಲ್ಲಿ ಆರೋಗ್ಯದ ಬಗ್ಗೆ ಜಾಗೃತಿಯನ್ನು ಮೂಡಿಸಿ, ತನ್ಮೂಲಕ ಸಮಾಜದ ಸ್ವಾಸ್ಥ್ಯ ಮಟ್ಟವನ್ನು ಉತ್ತಮಗೊಳಿಸುವುದು. ಸಾಂಕ್ರಾಮಿಕ ರೋಗಗಳ ನಿರ್ಮೂಲನದ ಸಂಕಲ್ಪದಿಂದ ಹಮ್ಮಿಕೊಂಡಿರುವ ಮತ್ತೊಂದು ಕಾರ್ಯಕ್ರಮ ಕ್ಷಯರೋಗ ನಿರ್ಮೂಲನ. ಇವೇ ಅಲ್ಲದೆ ನೇತ್ರ ಹಾಗೂ ದಂತ ಚಿಕಿತ್ಸೆಗಳ ಅನೇಕ ಶಿಬಿರಗಳನ್ನು ನಡೆಸುವುದು, ಮಹಿಳಾ ಆರೋಗ್ಯ ಕಾರ್ಯಕರ್ತೆಯರನ್ನು ತರಬೇತುಗೊಳಿಸಿ ಪ್ರತಿಯೊಂದು ಹಾಡಿಯಲ್ಲೂ ಅಥವಾ ಪೋಡುಗಳಲ್ಲೂ ತಾಯಿ ಮಕ್ಕಳ ಆರೋಗ್ಯದ ಬಗ್ಗೆ ಕಾಳಜಿ ವಹಿಸುವಂತೆ ಮಾಡಿರುವುದು ಈ ಆಶ್ರಮದ ಮತ್ತೊಂದು ಸಾಧನೆ.



ದಟ್ಟ ಅರಣ್ಯದ ಮಧ್ಯೆ ಬುಡಕಟ್ಟು ಜನರ ವಾಸ



ಬುಡಕಟ್ಟು ಜನರ ಮಕ್ಕಳಿಗೆ ವಿದ್ಯೆಯ ಬೆಳಕು



'ರೋಗಿ ದೇವೋ ಭವ'- ವೈದ್ಯಕೀಯ ಸೇವೆ.



ಉದ್ಯೋಗ ಅವಕಾಶ- ತರಬೇತಿ ಪಡೆದ ವ್ಯಕ್ತಿಯಿಂದ ಬೆತ್ತದ ಕೆಲಸ

ನಾರಾಯಣಪುರದಿಂದ ೩ ಕಿ.ಮೀ. ದೂರದಲ್ಲಿ ೫೨ ಎಕರೆ ವಿಸ್ತಾರವಾದ ಜಮೀನಿನಲ್ಲಿ ಕೃಷಿ ತರಬೇತಿ ಕೇಂದ್ರ ಮತ್ತು ಕೃಷಿ ಉತ್ಪನ್ನಗಳ ಪ್ರದರ್ಶನ ಕೇಂದ್ರವಿದೆ. ಸ್ಥಳೀಯ ಹವಾಮಾನದ ಅನುಕೂಲ ಪಡೆದು ಜಮೀನನ್ನು ಕೃಷಿಗೊಳಿಸುವುದು, ಗೊಬ್ಬರದ ಬಳಕೆ, ಆಧುನಿಕ ವಿಧಾನಗಳನ್ನು ಅನುಸರಿಸಿ ಹೈನುಗಾರಿಕೆ, ಪಶುಸಂಗೋಪನೆ, ಕೋಳಿ ಸಾಗಣೆ, ಮೀನುಗಾರಿಕೆ ಮುಂತಾದುವುಗಳಲ್ಲಿ ತರಬೇತಿ ನೀಡಲಾಗುತ್ತದೆ. ಆಶ್ರಮದ ಮಾರ್ಗದರ್ಶನದಲ್ಲಿ ವಿವೇಕಾನಂದ ಗ್ರಾಮ ಸೇವಾ ಸಂಘವು ಸ್ಥಾಪಿತವಾಗಿದೆ. ಇದರ ಮೂಲ ಉದ್ದೇಶ ಸ್ವ–ಸಹಾಯ ಸಂಘಟನೆಗಳನ್ನು ರೂಪಿಸುವುದು. ಈ ಸಂಘಟನೆಗಳು ವಿಭಿನ್ನ ಗ್ರಾಮಗಳಲ್ಲಿ ಜೈವಿಕ ಗೊಬ್ಬರ, ಗೋಬರ್ ಗ್ಯಾಸ್ ತಯಾರಿಕೆಯ ಬಗ್ಗೆ ತಿಳಿಸುವುದಲ್ಲದೆ ಸಾಪ್ತಾಹಿಕ ಕೃಷಿ ಅಧಿವೇಶನಗಳನ್ನೂ ನಡೆಸುತ್ತಿವೆ. ಜೊತೆಗೆ ವಿದ್ಯಾಲಯಗಳಲ್ಲಿ ಓದುತ್ತಿರುವ ತಮ್ಮ ಮಕ್ಕಳ ಕೋಚಿಂಗ್ ಕ್ಲಾಸ್ ವ್ಯವಸ್ಥೆ, ಸ್ವಯಂಪ್ರೇರಿತ ಶ್ರಮದಾನ, ಮಹಿಳಾ ಮಂಡಳಿಗಳು, ಗ್ರಾಮೀಣ ಯುವಕರಲ್ಲಿ ನಾಯಕತ್ವವನ್ನು ಬೆಳೆಸುವುದರಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿವೆ.

ಆರ್ಥಿಕ ಶೋಷಣೆಯನ್ನು ತಡೆಗಟ್ಟಲು ನಾರಾಯಣಪುರದ ಆಶ್ರಮವು ಅಭುಜ್‌ಮರ್‌ನಲ್ಲಿ ಸ್ಥಾಪಿಸಿರುವ ಐದು ನ್ಯಾಯಬೆಲೆ ಅಂಗಡಿಗಳ ಸಂಕೀರ್ಣಗಳು ಆದಿವಾಸಿಗಳಿಗೆ ವರದಾನದಂತಿವೆ. ವಿಶೇಷವಾಗಿ ಮಳೆಗಾಲದಲ್ಲಿ ಈ ಕಾಡು ಪ್ರದೇಶಗಳು ತಿಂಗಳಾನುಗಟ್ಟಲೆ ಹೊರಪ್ರಪಂಚದ ಸಂಪರ್ಕ ಕಳೆದುಕೊಳ್ಳುವ ದಿನಗಳಲ್ಲಂತೂ ಈ ಐದು ಅಂಗಡಿಗಳಲ್ಲಿ ದಾಸ್ತಾನುಗೊಳ್ಳುವ ದಿನಬಳಕೆಯ ದಿನಸಿಗಳು ಆದಿವಾಸಿಗಳ ನೆರವಿಗೆ ಬರುತ್ತವೆ.

೧೯೯೫ರಲ್ಲಿ ಅಸ್ತಿತ್ವಕ್ಕೆ ಬಂದು ಜಲಸೇಚನೆಯ ಪರಿಕಲ್ಪನೆಯನ್ನು ಹೊಂದಿರುವ ರಾಜೀವ್‌ಗಾಂಧಿ ವಾಟರ್‌ಷೆಡ್ ಮಿಷನ್ ಮೂಲಕ ಮಿಲಿ ವಾಟರ್‌ಷೆಡ್ ಯೋಜನೆಯು ಅಭುಜ್ ಮರ್‌ನ ಕೊಹಕಮೆಟ ಹಾಗೂ ಮುನ್ನಾರ್ ಸ್ಥಳಗಳಲ್ಲಿ ಜಲಾಶಯಗಳು, ಕೊಳಗಳು, ನೀರಾವರಿ ಯೋಜನೆಗಳು, ಚಿಕ್ಕ ಚಿಕ್ಕ ಬಾವಿಗಳು, ನಾಲೆಗಳು—ಇವುಗಳ ನಿರ್ಮಾಣವನ್ನು ಕೈಗೊಂಡಿದೆ.

ನಾರಾಯಣಪುರದ ರಾಮಕೃಷ್ಣ ಮಿಷನ್ ಆಶ್ರಮದ ಒತ್ತಾಸೆಯಲ್ಲಿ ವಿಶೇಷ ಪ್ರಾಮುಖ್ಯತೆಯನ್ನು ಪಡೆದಿರುವ ಕ್ಷೇತ್ರವೆಂದರೆ 'ಸ್ತ್ರೀಶಿಕ್ಷಣ'. ಮನೆಯ ನಾರಿ ನಿರಕ್ಷರಕುಕ್ಷಿಯಾದರೆ ಸಮಾಜದ ಪ್ರಗತಿ ಕುಂಠಿತವಾಗುತ್ತದೆ ಎಂಬ ಅರಿವಿನಿಂದ ವಿವೇಕಾನಂದ ವಿದ್ಯಾಪೀಠದ ಶಾಲೆಯಲ್ಲಿ ಹೆಣ್ಣುಮಕ್ಕಳಿಗೆ ಕಲಿಕೆಯ ಸೌಲಭ್ಯವನ್ನು ಕಲ್ಪಿಸುವ ಪ್ರಯತ್ನವನ್ನು ನಾರಾಯಣಪುರ ಆಶ್ರಮ ಮೊದಲಿನಿಂದಲೂ ಮಾಡಿಕೊಂಡು ಬಂದಿದೆ. ಆಶ್ರಮದ ಸಹಯೋಗದಲ್ಲಿ ನಡೆಯುತ್ತಿರುವ ವಿವೇಕಾನಂದ ಸಾಮಾಜಿಕ ಆರೋಗ್ಯ ಕಲ್ಯಾಣ ಹಾಗೂ ಸೇವಾಸಂಸ್ಥೆ (Vivekananda Institute of Social Health Welfare and Service—VISHWAS), ರಾಮಕೃಷ್ಣ ಮಿಷನ್ನಿನ ಅಭಿಮಾನಿ

ಗಳು ಹಾಗೂ ಹಿತೈಷಿಗಳಿಂದ ನಿರ್ವಹಿಸಲ್ಪಡುತ್ತಿರುವ ಒಂದು ಅಂಗಸಂಸ್ಥೆ. ಇದರ ಆಶ್ರಯದಲ್ಲಿ 'ಮಾ ಶಾರದಾ ಆವಾಸೀ ಬಾಲಕಿಯರ ಶಾಲೆ'ಗಳನ್ನು ನಾರಾಯಣಪುರ ಹಾಗೂ ಓರ್ಛಾದಲ್ಲಿ ನಡೆಸಲಾಗುತ್ತಿದೆ. ಮಕ್ಕಳ ಸಮಗ್ರ ವಿಕಾಸದ ಯೋಜನೆಯಡಿ ಅಂಗನವಾಡಿಗಳನ್ನು ಹಾಗೂ ಚಿಕ್ಕ ಅಂಗನವಾಡಿಗಳನ್ನು ಅಭುಜ್‌ಮರ್‌ನ ದೂರದ ದುರ್ಗಮ ಪ್ರದೇಶದ ಗ್ರಾಮಗಳಲ್ಲಿ ನಡೆಸಲಾಗುತ್ತಿದೆ. ಕುಶಲ, ಕಾರ್ಯೋತ್ಸಾಹಿ ಗ್ರಾಮೀಣ ಸ್ತ್ರೀಯರ ಶ್ರಮದಾನದಿಂದ ಹೆಣ್ಣುಮಕ್ಕಳ ಹಾಸ್ಟೆಲ್ ಕಟ್ಟಡಗಳು, ಶಿಕ್ಷಣ ಸಂಕೀರ್ಣಗಳೇ ಅಲ್ಲದೆ ರಸ್ತೆಗಳು, ಜಲಾಶಯಗಳು ಹಾಗೂ ಕೊಳಗಳ ನಿರ್ಮಾಣ ಸಾಧ್ಯವಾಗಿದೆ.

ಶಿಕ್ಷಣ, ಆರೋಗ್ಯರಕ್ಷಣೆ ಮತ್ತು ಆರ್ಥಿಕ ಉನ್ನತಿಗಾಗಿ ನಾರಾಯಣಪುರದಲ್ಲಿನ ರಾಮಕೃಷ್ಣ ಮಿಷನ್ ಅದಮ್ಯ ಉತ್ಸಾಹದಿಂದ ತೊಡಗಿಸಿಕೊಂಡು ಮಾಡಿರುವ ಸಾಧನೆಯನ್ನು ಗುರುತಿಸಿ ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳು ಅನೇಕ ಪುರಸ್ಕಾರಗಳನ್ನು ಈ ಸಂಸ್ಥೆಗೆ ನೀಡಿವೆ. ಯಾವುದೇ ಪ್ರದೇಶದ ಬುಡಕಟ್ಟು ಜನಾಂಗದ ಬದುಕನ್ನು ಕಟ್ಟುವುದು, ರಾಷ್ಟ್ರಜೀವನದ ಮುಖ್ಯವಾಹಿನಿಯಲ್ಲಿ ಅವರು ಸೇರುವಂತೆ ಮಾಡುವುದು, ಅವರ ಬಗ್ಗೆ ಸಾಕಷ್ಟು ಕಾಳಜಿ ವಹಿಸಿ ಶಿಕ್ಷಣ ನೀಡುವುದು— ಇವುಗಳೆಲ್ಲ ದುಸ್ತರವಾದ ಕೆಲಸಗಳೇ ಸರಿ. ಆದರೆ ಜಾಗತಿಕ ರಾಷ್ಟ್ರಗಳ ಒಕ್ಕೂಟದಲ್ಲಿ ಭಾರತಕ್ಕೆ ಯೋಗ್ಯ ಸ್ಥಾನ ಸಲ್ಲಬೇಕಾದರೆ ಇಂತಹ ಕೆಲಸ ಆಗಲೇಬೇಕಾಗಿದೆ. ಇತ್ತೀಚಿನ ದಿನಗಳಲ್ಲಿ ಆರ್ಥಿಕ ರಂಗದಲ್ಲಿ ಎಲ್ಲೆಡೆ ಆಗುತ್ತಿರುವ ಕ್ಷಿಪ್ರ ಬದಲಾವಣೆಗಳು ಈ ಬುಡಕಟ್ಟು ಜನಾಂಗದವರ ಬದುಕಿನಲ್ಲಿ ಯಾವ ರೀತಿಯ ಪರಿಣಾಮಗಳನ್ನುಂಟುಮಾಡಿವೆ ಎಂಬುದೂ ಇಲ್ಲಿ ಪ್ರಸ್ತುತ. ಪ್ರಾಕೃತಿಕ ಸಂಪನ್ಮೂಲಗಳು ಹೇರಳವಾಗಿ ದೊರಕುವ ಅರಣ್ಯ ಪ್ರದೇಶಗಳಲ್ಲಿರುವ ವನವಾಸಿಗಳ ಬದುಕು ಹೊರಜಗತ್ತಿನ ಪ್ರಭಾವಕ್ಕೆ ಚಾಚಿಕೊಳ್ಳುವಂತೆ ಮಾಡುವ ಪ್ರಕ್ರಿಯೆಯಲ್ಲಿ ಅವರ ಮೇಲೆ ಅನಗತ್ಯವಾದ ಚಿಂತನೆಗಳನ್ನು ಮತ್ತು ಪ್ರಭಾವವನ್ನು ಹೇರುವುದು ಅಪಾಯಕಾರಿ. ಆ ಜನಾಂಗ ತನ್ನ ಸಾಂಪ್ರದಾಯಿಕ ಬದುಕಿನ ಮೌಲ್ಯಗಳನ್ನು ಕಾಪಾಡಿಕೊಳ್ಳುವುದರ ಮೂಲಕ ತನ್ನ ವೈಶಿಷ್ಟ್ಯವನ್ನು ಉಳಿಸಿಕೊಂಡು ತನ್ನ ಕಾಲ ಮೇಲೆ ತಾನೇ ನಿಂತುಕೊಳ್ಳುವಂತೆ ಮಾಡುವಲ್ಲಿ ನಾರಾಯಣಪುರದಲ್ಲಿನ ರಾಮಕೃಷ್ಣ ಮಿಷನ್ನಿನ ಪ್ರಯತ್ನ ಇತರರಿಗೆ ಮಾದರಿಯಾಗಿದೆ.

✪

## ನಾರಾಯಣಪುರದಲ್ಲಿ ಶ್ರೀರಾಮಕೃಷ್ಣ ಪ್ರಾರ್ಥನಾ ಮಂದಿರದ ಉದ್ಘಾಟನೆ

ನಾರಾಯಣಪುರದ ರಾಮಕೃಷ್ಣ ಮಿಷನ್ನಿನ ಆವರಣದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ವಿಶಾಲವಾದ ಶ್ರೀರಾಮಕೃಷ್ಣ ಪ್ರಾರ್ಥನಾ ಮಂದಿರವು ೧೧ನೇ ನವೆಂಬರ್ ೨೦೦೫ರಂದು, ಜಗದ್ಧಾತ್ರಿದೇವಿಯ ಪೂಜೆಯ ಶುಭ ದಿನದಂದು ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಪರಮಪೂಜ್ಯ ಸ್ವಾಮಿ ಆತ್ಮಸ್ಥಾನಂದಜಿಯವರಿಂದ ಪ್ರತಿಷ್ಠಾಪಿಸಲ್ಪಟ್ಟಿತು. ಆ ದಿನ ಬೆಳಗ್ಗೆ ಎಂಟು ಗಂಟೆಗೆ ಪುಣ್ಯಾಹ, ವೇದಘೋಷಗಳೊಂದಿಗೆ ಕಾರ್ಯಕ್ರಮವು ನೆರೆದಿದ್ದ ನೂರಾರು ಸಾಧುಸಂತರ ಹಾಗೂ ಭಕ್ತಸಮೂಹದ ಸಮಕ್ಷಮದಲ್ಲಿ ಪ್ರಾರಂಭವಾಯಿತು. ಛತ್ತೀಸ್‌ಘಡದ ಮುಖ್ಯಮಂತ್ರಿಗಳಾದ ಮಾನ್ಯ ಡಾ. ರಮಣ್ ಸಿಂಗ್, ದೇವಸ್ಥಾನದಲ್ಲಿ ಪುಷ್ಪಗಳನ್ನು ಅರ್ಪಿಸಿ ಸ್ವಾಮಿ ವಿವೇಕಾನಂದರ ಪ್ರತಿಮೆಯನ್ನು ಅನಾವರಣಗೊಳಿಸಿದರು. ಇದೇ ಸಂದರ್ಭದಲ್ಲಿ ಪರಮಪೂಜ್ಯ ಸ್ವಾಮಿ ಆತ್ಮಸ್ಥಾನಂದಜಿಯವರು ಸಮರ್ಪಣ ಎಂಬ ಸ್ಮರಣಿಕೆಯನ್ನು ಬಿಡುಗಡೆ ಮಾಡಿ ಆಶೀರ್ವಚನ ನೀಡಿದರು; ಹಾಗೂ ಮಂದಿರ ನಿರ್ಮಾಣದಲ್ಲಿ ತೊಡಗಿಸಿಕೊಂಡಿದ್ದ ಎಲ್ಲರಿಗೂ ನೆನಪಿನ ಕಾಣಿಕೆಗಳನ್ನು ಕೊಟ್ಟರು. ಮೂರು ದಿನಗಳ ಕಾಲ ಭಜನೆ, ರಾಮಚರಿತ ಮಾನಸವನ್ನು ಕುರಿತ ಉಪನ್ಯಾಸಗಳು, ಹಾಗೂ ಇತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.


ಸಾಧುಗಳು ಮತ್ತು ಭಕ್ತರಿಂದ ಶೋಭಾಯಾತ್ರೆ



ಸಮಾರಂಭದಲ್ಲಿ, ಎಡದಿಂದ ಸ್ವಾಮಿ ನಿಖಿಲಾತ್ಮಾನಂದಜಿ, ಸ್ವಾಮಿ ಸ್ಮರಣಾನಂದಜಿ, ಪೂಜ್ಯರಾದ ಸ್ವಾಮಿ ಆತ್ಮಸ್ಥಾನಂದಜಿ, ಸ್ವಾಮಿ ಸತ್ಯರೂಪಾನಂದಜಿ ಭಾಗವಹಿಸುತ್ತಿರುವುದು.